# ವಿಷ್ಣು ನೆನಪು; ಮನಸ್ಸಿಗೆ ತಂಪು!

**ನಮ್ಮ ನೆಚ್ಚಿನ ನಟ ವಿಷ್ಣುವರ್ಧನ್ ಕೊಡಗಿಗೆ ಬಂದದ್ದು, ಅವರ ಜತೆಗೆ ಮಾತನಾಡಿದ್ದು ಸುಮಾರು 20 ವರ್ಷಗಳಷ್ಟು ಹಿಂದೆ. ಅವರೊಂದಿಗೆ ಕಳೆದ ಕ್ಷಣಗಳ ಆ ನೆನಪು ಮಾತ್ರ ಸದಾ ಹಸಿರು.**

■ ರಕ್ಷಿತಾ ಆರ್.ಬಿ.

ಸಿನಿಮಾ ನಟರಲ್ಲಿ ಏನೋ ಆಕರ್ಷಣೆ ಇದೆ. ಜನಪ್ರಿಯ ನಟರ ಸಿನಿಮಾ ನೋಡುವುದಂತೂ ಸದಾ ಮನಸ್ಸಿಗೆ ಆನಂದ ತರುತ್ತದೆ. ಚಲನಚಿತ್ರಗಳಲ್ಲಿ ನಾಯಕರಾದವರು ನಿಜ ಜೀವನದಲ್ಲಿ 'ಸೆಲೆಬ್ರಿಟಿ'ಗಳ ಸಾಲಿಗೆ ಸೇರುತ್ತಾರೆ. ಹಳೆಯ ಸಿನಿಮಾಗಳಲ್ಲಿನ ನಾಯಕ ನಟರನ್ನು ನಿಜ ಜೀವನದಲ್ಲಿ ನೋಡುವುದೇ ಖುಷಿ. ಅವರನ್ನು ಮತ್ತಷ್ಟು ಸನಿಹದಲ್ಲಿ ನೋಡಿ ಮಾತನಾಡಿದರಂತೂ ಅದು ಬಹುಕಾಲ ಮನಸ್ಸಿನಿಂದ ಮಾಸುವುದೇ ಇಲ್ಲ.

ಸಾಹಸ ಸಿಂಹ ವಿಷ್ಣುವರ್ಧನ್ ನನಗೆ ಬಹಳ ಮೆಚ್ಚಿನ ನಟ. ಅವರು ಸುಮಾರು 20 ವರ್ಷಗಳ ಹಿಂದೆ (1998)ರಲ್ಲಿ ಕೊಡಗಿಗೆ ಬಂದಿದ್ದರು. ಆಗ ನನ್ನ ತಂದೆಗೆ ಕೊಡಗು ಜಿಲ್ಲೆ ಸುಂಟಿಕೊಪ್ಪಕ್ಕೆ ವರ್ಗಾವಣೆಯಾಗಿತ್ತು. ಆಗ ನಾನಿನ್ನೂ ನಾಲ್ಕು ವರ್ಷದ ಪುಟ್ಟ ಹುಡುಗಿ.

'ದಕ್ಷಿಣದ ಕಾಶ್ಮೀರ', 'ಪ್ರವಾಸಿಗರ ಸ್ವರ್ಗ' ಎಂದೆಲ್ಲ ಕರೆಸಿಕೊಂಡಿದ್ದ ಕೊಡಗು, ಭೂದೇವಿಯ ರಮಣೀಯ ತಾಣಗಳ ತವರೂರು ಕೂಡ ಹೌದು. ಇಲ್ಲಿಯ ಅನೇಕ ದೃಶ್ಯವೈಭವಗಳ ಸ್ಥಳಗಳನ್ನು ಚಲನಚಿತ್ರಗಳಲ್ಲಿ ದಾಖಲಿಸುವ ಸಲುವಾಗಿ ಸಿನಿಮಾ ಶೂಟಿಂಗ್ ತಂಡಗಳು ಆಗಾಗ ಇಲ್ಲಿಗೆ ಬಂದು ಹೋಗುತ್ತಿದ್ದ ಸುದ್ದಿಯನ್ನು ಕೇಳುತ್ತಿದ್ದೆವು. ನನ್ನ ತಂದೆ ರಮೇಶ್ ಬಿ.ಎಂ. ಅವರ ಪರಿಚಯದ ಉಲುಗುಲಿ ಎಸ್ಟೇಟ್‌ನಲ್ಲಿಯೇ "ನಿಶ್ಶಬ್ದ' ಎಂಬ ಸಿನಿಮಾದ ಶೂಟಿಂಗ್ ಕೆಲಸ ನಡೆಯುತ್ತಿತ್ತು. ಖ್ಯಾತ ನಟ ವಿಷ್ಣುವರ್ಧನ್ ಅವರು, ನಟಿಯರಾದ ರೇವತಿ ಹಾಗೂ ಮೋಹಿನಿ ಜತೆಗೆ ಶೂಟಿಂಗ್‌ಗೆ ಬಂದಿದ್ದರು.

ಈ ತಾರಾಗಣವನ್ನು ನೋಡಲು ಅನುವು ಮಾಡಿಕೊಡಿಸುವಂತೆ ಎಸ್ಟೇಟ್‌ನ ಮಾಲೀಕರಲ್ಲಿ ನನ್ನ ತಂದೆ ಕೇಳಿಕೊಂಡರು. ಅವರ ಸಹಕಾರದಿಂದ ನಾವು ಈ ಎಲ್ಲಾ ತಾರೆಯರನ್ನೂ ಭೇಟಿ ಆಗಿ ಕೆಲಹೊತ್ತು ಮಾತನಾಡುವ ಅವಕಾಶ ಸಿಕ್ಕಿತ್ತು. ಚಿತ್ರೀಕರಣದ ಬಗ್ಗೆ ಹೊಸ ಹೊಸ ವಿಚಾರಗಳನ್ನು ನಮಗೆ ಇಲ್ಲಿ ತಿಳಿಯುವಂತಾಯಿತು.

ಸುಪ್ರಸಿದ್ಧ ನಟ ವಿಷ್ಣುವರ್ಧನ ಅವರ ಬಳಿಗೆ ಹೋದಾಗ ಏನೋ ಒಂದು ಥರದ ಖುಷಿ, ಪುಳಕ, ಆನಂದ ಹಾಗೂ ಹೆಮ್ಮೆ. ಜತೆಗೆ ಅವರು ನಮ್ಮೊಂದಿಗೆ ಹೇಗೆ ಮಾತನಾಡುತ್ತಾರೋ ಎಂಬ ಕುತೂಹಲ. ನನ್ನ ತಂದೆ ವಿಷ್ಣು ಬಳಿ ಸ್ವಲ್ಪ ಹೊತ್ತು ಮಾತನಾಡಿದರು. ಸಿನಿಮಾಗಳಲ್ಲಿ ಅವರ ನಟನೆ ಬಗ್ಗೆ ಅಭಿಮಾನ ವ್ಯಕ್ತಪಡಿಸಿದಾಗ ವಿಷ್ಣುವರ್ಧನ್‌ಗೆ ಅತೀವ ಆನಂದ ಆಯಿತು. ಅನೇಕ ಚಿತ್ರಗಳಲ್ಲಿನ ಅವರ ನಟನೆ, ಪ್ರೌಢಿಮೆಯ ಬಗ್ಗೆ ಅಭಿಮಾನದಿಂದ ಮಾತನಾಡಿದಾಗ ಅವರೂ ಅತ್ಯಂತ ಆತ್ಮೀಯತೆಯಿಂದ, ಸರಳವಾಗಿ ಹಾಗೂ ಸ್ನೇಹಪೂರ್ಣ ನಗೆಯೊಂದಿಗೆ ನಮ್ಮೊಂದಿಗೆ ಮಾತನಾಡಿದ್ದು ನಮಗೆ ಅತೀವ ಸಂತೋಷ ತಂದಿತು.

ನನ್ನ ಅಮ್ಮ (ಮೀನಾಕ್ಷಿ ಆರ್.ಬಿ.) ಸೆರಗಿಗೆ ಅಂಟಿಕೊಂಡು ದೂರದಲ್ಲಿ ನಿಂತಿದ್ದ ನನ್ನನ್ನು ವಿಷ್ಣುವರ್ಧನ್ ಕರೆದು, 'ಏನು ನಿನ್ನ ಹೆಸರು?' ಎಂದಾಗ ನನಗೆ ಖುಷಿಯೋ ಖುಷಿ ಆಗಿತ್ತು. 'ರಕ್ಷಿತಾ' ಅಂತ ಹೇಳಿದ್ದೆ. ಆಗ ಅವರು ಹತ್ತಿರ ಬರಲು ಹೇಳಿದರು. ನನ್ನ ತಲೆಯನ್ನು ನೇವರಿಸುತ್ತಾ, 'ಧರ್ಮೋ ರಕ್ಷತಿ ರಕ್ಷಿತಃ' ಒಳ್ಳೆಯ ಕೆಲಸವನ್ನು ಮಾಡಿ ಹೆಸರುವಾಸಿಯಾಗು' ಅಂತ ಮನಃಪೂರ್ವಕವಾಗಿ ಹಾರೈಸಿದರು. ನನಗಂತೂ ಅವರು ನನಗೆ ಏನನ್ನೋ ಒಳ್ಳೆಯದೇ ಹೇಳಿದ್ದಾರೆ ಎಂದಷ್ಟೇ ಅರ್ಥವಾಯಿತು. ಬಳಿಕ ನನ್ನ ಅಪ್ಪ ಅಮ್ಮ, ವಿಷ್ಣುವರ್ಧನ್ ಮಾಡಿದ ಆಶೀರ್ವಾದದ ಬಗ್ಗೆ ವಿವರಿಸಿದಾಗ ನಿಜಕ್ಕೂ ಪುಳಕಗೊಂಡೆ.



ಅದಾಗಿ ಕೆಲ ವರ್ಷಗಳಲ್ಲೇ ನಮ್ಮ ಮೆಚ್ಚಿನ ವಿಷ್ಣು ಎಲ್ಲರನ್ನು ಅಗಲಿದರು. ಈ ಮೇರು ನಟನ ಸಾವು ನಮಗೆಲ್ಲರಿಗೂ ಆಘಾತವನ್ನು ತಂದಿತ್ತು. ಅವರ ಅಗಲುವಿಕೆಯು ಕನ್ನಡ ಚಿತ್ರರಂಗಕ್ಕೆ ಬಹುದೊಡ್ಡ ನಷ್ಟ. ಅಪಾರ ಅಭಿಮಾನಿಗಳೊಂದಿಗೆ ನಾವೆಲ್ಲಾ ಕಂಬನಿಗರೆದೆವು. ಅವರೊಂದಿಗಿನ ಕೆಲವೇ ನಿಮಿಷಗಳ ಒಡನಾಟವು ನಮ್ಮ ನೆನಪಿನಂಗಳದಲ್ಲಿ ಸದಾ ಸವಿಯಾದ ನೆನಪುಗಳನ್ನು, ಅನುಭವವನ್ನು ನೀಡುತ್ತಲೇ ಇದೆ. ■